
## ಕಳೆದ ಸಂಚಿಕೆಯಲ್ಲಿ



ದೊಡ್ಡವರ ಸಣ್ಣತನಗಳಲ್ಲಿ ಮುಗ್ಧ ಮಕ್ಕಳ ಕಲರವವೇ ಊರಿನಲ್ಲಿ ಜೀವನೋತ್ಸಾಹ ತುಂಬುವುದು. ತ್ಯಾಗನ ಬಗ್ಗೆ ಊರವರಿಗೆಲ್ಲ ಅನುಕಂಪ ಬೆರೆತ ಅಕ್ಕರೆ. ಅಪ್ಪನನ್ನು ಕಳೆದುಕೊಂಡ ಮಗ ಹುಷಾರಾಗಿ ಬೆಳೆಯಲಿ ಎನ್ನುವುದು ಅವರ ಹಾರೈಕೆ. ಅಪ್ಪನ ಮಾತು ಬಂದಾಗಲೆಲ್ಲ ತ್ಯಾಗ ಖಿನ್ನನಾಗುತ್ತಿದ್ದ. ಅಪ್ಪನ ಸಾವಿನ ಬಗ್ಗೆ ಊರವರು ಆಡುತ್ತಿದ್ದ ಮಾತುಗಳು ಅವನಿಗೆ ಪೂರ್ಣ ಅರ್ಥವಾಗುತ್ತಿರಲಿಲ್ಲ. ದ್ಯಾವಕ್ಕನಿಗೆ ಮಗನ ತುಂಟಾಟಗಳು ಕುತ್ತಿಗೆಗೆ ತರುತ್ತಿದ್ದವು. ಯಾರದೋ ಹೊಲಕ್ಕೆ ಕದಿಯಲು ಹೋದದ್ದಕ್ಕಾಗಿ ಮಗನಿಗೆ ಸರಿಯಾಗಿ ಪೆಟ್ಟು ಕೊಟ್ಟಳು. ತ್ಯಾಗ ಈಜಲು ಹೋದಾಗ, ಮಲ್ಲ ಅವನ ಬಟ್ಟೆಗಳನ್ನು ತೆಗೆದುಕೊಂಡು ಹೋಗಿ ಬೇಲಿಗೆ ಹಾಕಿದ. ಬೆತ್ತಲೆ ಮೈಯನ್ನು ಹುದುಗಿಸಿಕೊಂಡು ಮನೆ ಸೇರುವ ವೇಳೆಗೆ ತ್ಯಾಗನಿಗೆ ಸಾಕುಸಾಕಾಯಿತು. ಬಟ್ಟೆ ಕದ್ದದ್ದು ಮಲ್ಲನೇ ಇರಬೇಕೆಂದು ತ್ಯಾಗನಿಗೆ ಅನ್ನಿಸಿದರೂ, ಅದನ್ನು ಬಾಯಿ ಬಿಟ್ಟು ಹೇಳುವಂತಿರಲಿಲ್ಲ. ಅದೇ ವೇಳೆಗೆ ಊರಿಗೆ ಬಂದ ಹಗಲುವೇಷದವರು ತ್ಯಾಗನ ಮನಸ್ಸಿನಲ್ಲಿ ಹೊಸ ಕನಸುಗಳನ್ನು ಮೂಡಿಸಿದರು.

ಮನೆಯ ಕಡೆ ಹೊರಟ. ದಾರಿ ಉದ್ದಕ್ಕೂ ತ್ಯಾಗನ ಆಕ್ರಂದನ ಗವಿರಂಗಣ್ಣನ ಸುತ್ತ ಸುತ್ತುತ್ತಲೇ ಇತ್ತು. ಮನೆ ತಲುಪಿದ ಗವಿರಂಗಣ್ಣ ಮಗನಿಗೆ ಒಂದು ಪತ್ರ ಬರೆದ. 'ನಿನ್ನ ಪತ್ರ ಓದಿದೆ. ವಿಷಯ ತಿಳಿಯಿತು. ಡಿಸ್ಟಿಂಕ್ಷನ್ ಬಂದಿರುವುದು ತಿಳಿದು ಸಂತೋಷವಾಯಿತು. ಅಮ್ಮನೂ ಖುಷಿ ಪಟ್ಟಿತು. ನನ್ನನ್ನು ಮತ್ತು ಅಮ್ಮನನ್ನು ಬರಲು ಹೇಳಿದ್ದೀಯ. ಆದರೆ ಆ ದಿನ ನಾನು ಬರಲು ಸಾಧ್ಯವಾಗುತ್ತಿಲ್ಲ. ನಾನು ಸಿದ್ದಗಂಗೆ ಸ್ವಾಮೀಜಿಗಳನ್ನ ಆ ದಿನವೇ ಭೇಟಿಯಾಗಬೇಕಿದೆ. ಇಲ್ಲೇ ಇದ್ದರೆ ಸಿದ್ದನ ಹುಡುಗ ವಿದ್ಯಾಭ್ಯಾಸ ಕಲಿಯೋದಿಲ್ಲ. ಊರಿನ ಇಂಥಾ ಪರಿಸ್ಥಿತಿಯೊಳಗೆ ಇವನು ಇರೋದು ಯೋಗ್ಯವಲ್ಲ. ಈ ಹುಡುಗನಿಗೂ ಓದಿನ ಯೋಗ್ಯತೆ ಬರುವಂತೆ ಮಾಡೋಕೆ ಈಗಿನಿಂದ ಪ್ರಯತ್ನಪಡಬೇಕಾಗಿದೆ. ನಿನ್ನ ಕೆಲಸ ಮುಂದುವರೆಯಲಿ' ಎಂದಷ್ಟೇ ಹೇಳಿ ಪತ್ರ ಮುಗಿಸಿದ್ದರು.

ಈ ಮಲ್ಲನಂಥ ಲಫಟ ಕೊರಮನಿಂದ ಸಣ್ಣ ಸಣ್ಣ ಜಾತಿಯ ಜನಕ್ಕೆ ಕುತ್ತು. ತೋಳ ಬೆನ್ನಟ್ಟಿಹೋದ ಹುಲ್ಲೆ ಮರಿಯಂತಾಗಿತ್ತು ತ್ಯಾಗನ ಸ್ಥಿತಿ. ಆ ಮಲ್ಲನಿಗೆ ಹಣದ ಅಹಂ ಬಿಟ್ಟರೆ ಊರ ಮಂದಿಯ ಮೇಲೆ ಅಭಿಮಾನ ಸಣ್ಣ ಕಣದಷ್ಟೂ ಇಲ್ಲ. ಆಳು ಕಾಳುಗಳು ಅವನ ಎದುರಿಗೆ ಕಂಡರೆ, ಯಾರೋ ದನಗಳನ್ನು ಮೇಯಿಸಲು ಹೊರಗೆ ಬಿಟ್ಟರೆ ಕೆಟ್ಟ ಮಾತುಗಳನ್ನಾಡಿ ಸಿಕ್ಕಿದವರ ಮೇಲೆ ಜಗಳಕ್ಕೆ ಬೀಳುತ್ತಾನೆ. ಹೊಡೆದೇ ಬಿಡುತ್ತಾನೆ. ದನ, ಕರು ಬಾರೆಯಲ್ಲಿ ಮೇದು ಊರಿಗೆ ಹಿಂದಿರುಗುತ್ತಿದ್ದರೆ ಅವುಗಳನ್ನು ಅದೆಲ್ಲೆಲ್ಲೋ ದೂರಕ್ಕೆ ಓಡಿಸಿ ಬರುತ್ತಾನೆ. ಮಲ್ಲನ ಇಂಥ ದೌರ್ಜನ್ಯದ ವರ್ತನೆಯನ್ನು ಊರಿನಲ್ಲಿ ಪ್ರಶ್ನಿಸುವವರು ಯಾರೂ ಇರದಿದ್ದುದು ಅವನಿಗೆ ಇಂತೆಲ್ಲಾ ಕೃತ್ಯಗಳನ್ನು ಎಸಗಲು ಸಲಿಗೆ ಸಿಕ್ಕಿದಂತಾಗಿತ್ತು. ಮಲ್ಲನ ಇಂಥಾ ಕಿಡಿಗೇಡಿ ಕೃತ್ಯಗಳನ್ನೆಲ್ಲ ಕಂಡಿದ್ದ ಗವಿರಂಗಣ್ಣನಿಗೆ ತ್ಯಾಗನ ಬಗ್ಗೆ ಕನಿಕರ ಮೂಡಿ ಓದಿಗಾಗಿ ಮಠಕ್ಕೆ ಸೇರಿಸುವ ಯೋಚನೆ ಮಾಡಿದ್ದ.

* * *

'ಲೇ ಶಿವಣ್ಣ ಒಂದು ಕಟ್ ಬೀಡಿ ಕೊಡ್ಲ' ಅನ್ನುತ್ತ ಕೈಯಲ್ಲಿ ಹಿಡಿದಿದ್ದ ಕೋಲನ್ನು ಅಂಗಡಿಗೆ ಒರಗಿಸಿ ಬ್ಯಾಟರಿ ಕಂಕುಳಿಗೆ ಇರುಕಿಕೊಳ್ಳುತ್ತ ನಂಜಣ್ಣ ಬೀಡಿ ಕಟ್ಟಿಗೆ ಕಾಸು ಕೊಡೋಕೆ ಅಂತ ಚಡ್ಡಿ ಜೇಬಿಗೆ ಕೈ ಹಾಕಲು ಹೋದ. ಬೀಡಿ ಕೊಡೋಕೆ ಅಂತ ಬಂದ ಶಿವಣ್ಣ, ನಂಜಣ್ಣನ ಕಂಕುಳಿಂದ ಜಾರಿ ಬೀಳುತ್ತಿದ್ದ ಬ್ಯಾಟರಿಯನ್ನು ಕ್ಯಾಚ್ ಹಿಡಿದು 'ಇರಣ್ಣ, ಇರು. ಒಂದು ಸೆಕೆಂಡಲ್ಲಿ ಬ್ಯಾಟ್ರಿ ಬಿದ್ದೋಗದಲ್ಲ. ಎಲ್ಲೋಗದು ಕಾಸು, ನಿಧಾನಕ್ಕೆ ತಕ್ಕತಿದ್ದೆ' ಅಂತ ಅವನು ಮಾತು ಮುಗಿಸುವ ಹೊತ್ತಿಗೆ ಚೊಟ್ಟನಿಂಗ ಅಡ್ಡ ಆದ. ಅವನ ಕಾಣುತ್ತಲೇ ನಂಜಣ್ಣ 'ಲೋ ನಿಂಗ ನೀನಿಲ್ಲೇ ಸಿಕ್ದೆ ನೋಡು. ನಾನು ಪರಮೇಶನ್ನ ನಿನ್ ಮನೆತಕೆ ಹೋಗ್‌ಬಾ, ನಿಂಗ ಇದ್ದಾನೋ ಇಲ್ವೋ ನೋಡು ಅಂತ ಹೇಳಿ ಇದೇ ತಾನೆ ಬಂದೆ' ಎನ್ನುತ್ತ ಅವನತ್ತಲೇ ನೋಡಿದ. ನಿಂಗಣ್ಣನಿಗೆ ಕತ್ತಲೆಯಲ್ಲಿ ಮೊದಲು ನಂಜಣ್ಣನ ದನಿ ಕೇಳಿಸಿ ನಂತರ ಅವನ ದೇಹ ಮಸುಕಾಗಿ ಕಾಣಿಸಿತು. 'ಯಾಕಣ್ಣ' ಅಂದ. 'ನಾಳೆ ಮರಿ ಕುಯ್ತೀನಿ, ನಿನಗೆ ಎಷ್ಟು ಪಾಲು ಬೇಕು ಕೇಳು ಅಂತ ಕಳುಸ್ದೆ ನೋಡು' ಎಂದ ನಂಜಣ್ಣನ ಮಾತು ಕೇಳಿ ನಿಂಗಣ್ಣನಿಗೆ ಜೊಲ್ಲು ತುಂಬಿ ಬಂದು, 'ನನಗೆ ಒಂದ್ಮೂರ್ ಗುಡ್ಡೆ ಬೇಕು, ಆದರೆ ಬಾರು ಗೀರು ಚನ್ನಾಗಿರಬೇಕು' ಅಂತ ಹೇಳುತ್ತ ಒಂದು ಗುಟುಕು ಜೊಲ್ಲ ಅಂಗೇ ನುಂಗಿಕೊಂಡ.

'ಅಯ್ಯೋ ಅದೇನು ನಾನು ತಿನ್ನಬೇಕಾ? ಎಲ್ಲಗ್ರೂ ಏನ್ ಬರುತ್ತೆ ಅದ ಆಕ್ತೀನಿ. ನಿನ್ನೊಬ್ಬನ್ಗೆ ಬೇರೆ ಮಾಡ್ತೀವಾ?' ಅಂತಂದ ನಂಜಣ್ಣ.

'ಲೇ ಶಿವ ನಿನಗೆ ಬೇಕೆನಲ?' ಎಂದು ಶಿವನಿಗೆ ಹೇಳುವುದನ್ನು ಮರೆಯಲಿಲ್ಲ. 'ಬ್ಯಾಡ ಕನಣ, ಮನೇಲಿ ಮಾಡೋರು ಯಾರೂ ಇಲ್ಲ' ಅಂದ ಶಿವಣ್ಣ ಸುಮ್ಮನಾದ.

ಅಲ್ಲಿಂದ ಹೊರಟ ನಂಜಣ್ಣ ನಾಳೆ ಕುಯ್ಯಲಿರುವ ಹಂದಿಯ ಲೆಕ್ಕಾಚಾರದಲ್ಲೇ ಮನೆಗೆ ಬಂದ. 'ಏ ತಾಯಿ, ಬೆಳಿಗ್ಗೆ ಗೂಡಿನಿಂದ ಹಂದಿ ಹೊರಗೆ ಬಿಡಬೇಡ, ಬಿಟ್ರೆ ಅದನ್ನ ಹಿಡಿಯೋದು ಕಷ್ಟ. ಅಲ್ಲೇ ಮೇವು ನೀರು ಕೊಟ್ಟು ಹೊರಗೆ ಬಿಡದಂತೆ ನೋಡ್ಕೊಬೇಕು' ಅಂತ ಹೆಂಡತಿಗೆ ಹೇಳಿದ. ಆ ಮಾತು ಕೇಳಿಸಿಕೊಂಡ ಮಗಳು ದೊಡ್ಡಮ್ಮ 'ಅಪ್ಪ ಅದ್ಯಾಕೀಗ್ಲೇ ಕುಯ್ತಿಯ? ಇನ್ನೂ ಸ್ವಲ್ಪ ದಿನ ಇದ್ದಿದ್ದರೆ ಮರಿ ಬಲಿಯೋದು. ಆಗ ಕಾಸು ಹೆಚ್ಚಿಗೆ ಬತ್ತಿರಲಿಲ್ಲವಾ?' ಎಂದ ಮಾತಿಗೆ, 'ಏ ಯಾಕ್ ಬಿಡವ್ವ, ಈಗ್ಲೇ ಇದನ್ನ ತಿನ್ನೋರಿಲ್ಲ. ಇನ್ನೊಷ್ಟು ದಿನ ಬಿಟ್ಟು ಕುಯ್ದರೆ ಯಾರ್ ಕೇಳ್ತರೆ? ಆ ಹಿತ್ಲಿಗೆ ನುಗ್ತು, ಈ ಹಿತ್ಲಿಗೆ ನುಗ್ತು ಅಂತ ಎಲ್ಲಾರ್ ಬಾಯಲ್ಲೂ ಒಂದೊಂದ್ ಮಾತ್ ಕೇಳ್ಬೇಕು. ಯಂಗೂ ನಿನ್ ಬೇರೆ ಕಳುಸ್ಬೇಕು. ಕೈಗೆ ಕಾಸು ಬಂದ್ರೆ ಮಗಿನ್ ಕೈಕಾಲ್ಗೇನಾರ ಚಿನ್ನ ಬೆಳ್ಳಿ ಹಾಕಿ ಕಳಿಸಿದರೆ ನಮಗೂ ಸಮಾಧಾನ ಆಗುತ್ತೆ. ಎಷ್ಟು ದಿನ ಬಿಟ್ರೂ ಹಂದಿ ಹಂದಿನೆ. ಎರಡ್ ಕಾಸು ಕಮ್ಮಿನೇ ಬರ್ಲಿ. ಈಗ್ಲೇ ಕೂಯ್ದು ಮುಗ್ಸನ' ಎಂದ. ನೋಟ ತೊಟ್ಟಿಲಕಡೆಗೊಮ್ಮೆ ಹರಿದು ಮೊಮ್ಮಗನ ಕಡೆಗೆ ತಿರುಗಿ, 'ಒಳ್ಳೆ ಅದೃಷ್ಟವಂತ ನೀನು. ಮೈ ತುಂಬ ಚಿನ್ನ ಬೆಳ್ಳಿ ಹಾಕ್ಕೊಂಡು ಒಳ್ಳೆ ರಾಜ್‌ಕುಮಾರನ ಥರ ನೀನು ನಿಮ್ಮೂರ್ಗೆ ಹೋಗ್ತಿಯ ಅನ್ನು' ಎಂದು ಹೇಳಬೇಕಾದರೆ, ಅಲಗುವ ತಾತನ ಬಾಯನ್ನೇ ನೋಡುತ್ತಾ ಆ ಮಗು ಕಣ್ಣರಳಿಸುತ್ತಾ ನಗುತ್ತಿತ್ತು. 'ಅಪ್ಪೋ ಏನು ಜಾಸ್ತಿ ಖರ್ಚು ಮಾಡ್ಬೇಡ. ಇವರಪ್ಪೂ ತರ್ತಿನಿ ಅಂತ ಹೇಳೋಗರ್ವೆ. ಒಂದ್ ಬೆಳ್ಳಿ ಉಡ್ದಾರ ತಂದಾಕು ಸಾಕು' ಅಂದಳು ಮಗಳು.

ಅಡುಗೆ ಮನೆಯಿಂದ ಹೊರಗೆ ಬಂದ ತಾಯಮ್ಮ 'ಮುತ್ತಿನರಳಿನ ಒಂದು ಲೋಲಾಕು ಕಿವಿಗೆ ತನ್ನಿ, ಒಂದು ಜೊತೆ ಕಾಲೊಂದಿಗೆ, ಒಳ್ಳೆ ಬಟ್ಟೆ ಮಗಿಗೆ. ಇವಳಿಗೊಂದು ಸೀರೆ ತರಬೇಕು. ಒಂದುಕ್ಕಾದ್ರೆ ಇನ್ನೊಂದ್ಲಿಲ್ಲ ಅನ್ನಂಗೆ ಮಾಡ್ಬಿಡ್ಬೇಡ್ರಿ' ಅಂತ ಅಂದು, 'ನಡೀರಿ ಊಟ ಮಾಡಿವ್ರಂತೆ' ಎಂದಳು. ನೀರಿನ ತಂಬಿಗೆ ಕೈಗೆ ಕೊಡುತ್ತ 'ಸಾಕಿದಂದಿ ಕುಯ್ಯೋದು ಅಂತಂದ್ರೆ ಮಕ್ಕಳ ಕತ್ತು ಕುಯ್ದಾಂಗೆ, ನಾವು ಹಂದಿ ಕುಯ್ಸಲೇ ಬಾರ್ದಿತ್ತು. ಯಾರಿಗಾದ್ರೂ ಮರಿನೇ ಮಾರಿ ಒಟ್ಟಿಗೇ ಕಾಸು ಈಸ್ಕೋಬಹುದಿತ್ತು' ಎಂದ ತಾಯಮ್ಮನ ಕಣ್ಣೊಳಗೆ ನೀರಾಡಿದವು.

ರಾತ್ರಿಯೆಲ್ಲ ಊರು ಸುತ್ತಿ ಮರಿ ಕುಯ್ತೀನಿ ನಿಮಗೆಷ್ಟು ಪಾಲು ಬೇಕು ಅಂತ ಜನರ ಪಟ್ಟಿ ತಯಾರು ಮಾಡಿಕೊಂಡು ಬಂದಿದ್ದ ನಂಜಣ್ಣ ಇಡೀ ರಾತ್ರಿ ಮರಿ ಹಿಡಿಯೋಕೆ ಯಾರ್ಯಾರು ಬೇಕು, ಅದನ್ನ ಹೆಂಗೆ ಹಿಡಿಬೇಕು, ಇಷ್ಟೆಲ್ಲಾ ಯೋಚನೆ ತಲೆಗೆ ಬಂದು ರಾತ್ರಿ ನಿದ್ರೆ ಬಾರದೆ ನಾಲ್ಕೈದು ಬಾರಿ ಬರಟೀ ಮಾಡಿಕೊಂಡು ಕುಡಿದು ಎಚ್ಚರಾಗಿದ್ದ. 'ಇದ್ಯಾಕಪ್ಪೋ ಮಲಿಕ್ಕೋ... ನಿದ್ರೆಗೆಟ್ಟು ಹುಷಾರ್ಗಿಷಾರ್ ತಪ್ಪೀಯ' ಎಂದು ಸರಿ ರಾತ್ರಿಲಿ ಎಚ್ಚರಾದ ಮಗಳು ಅಪ್ಪನಿಗೆ ಹೇಳಿ ಮಗ್ಗುಲಾದಳು. ನಿದ್ರೆಯಿಂದ ಎದ್ದು ಅಳುತ್ತಿದ್ದ ಮಗುವನ್ನು ತನ್ನ ಹೊಟ್ಟೆಕಾವಿಗೆ